ಓ.ಎಸ್.ನಂ.18/2025

ಪಿ.ಡಬ್ಲು-1

ಮಹಾಂತಪ್ಪ ತಂದೆ: ಶರಣಪ್ಪ ಮೂಗಿನ್

**ಇಂದು ದಿನಾಂಕಃ01-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಡಿ ಎಮ್ ಡಿ ವಕೀಲರಿಂದ.**

ನನಗೆ ಓದಲು ಬರೆಯಲು ಬರುವುದಿಲ್ಲ. ದಾವೆಯಲ್ಲಿ ನಾನು ಹೇಳಿದ ವಿಚಾರಗಳನ್ನು ಬರೆದಿರುತ್ತಾರೆ. ನನ್ನ ತಂದೆ ಹೆಸರು ಶರಣಪ್ಪ ಇರುತ್ತದೆ. ಶರಣಬಸಪ್ಪ ನನ್ನ ತಂದೆಯ ಹೆಸರು ಅಲ್ಲ. ನನ್ನ ತಾಯಿಯ ಹೆಸರು ಶಿವಕಾಂತಮ್ಮ ಎಂದರೆ ಸರಿ. ನಮ್ಮ ತಂದೆ ಶರಣಪ್ಪರವರಿಗೆ ನಾವು 5 ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣು ಮಗಳು ಇರುತ್ತೇವೆ. ಸದರಿ ವಿಚಾರವನ್ನು ನಮ್ಮ ವಕೀಲರಿಗೆ ಹೇಳಿ ನಾನು ಹೇಳಿರುತ್ತೇನೆ. ನನ್ನ ವಾದ ಪತ್ರದಲ್ಲಿ ಸದರಿ ವಿಚಾರವನ್ನು ತಿಳಿಸಿರುತ್ತೇನೆ.

2. ನನ್ನ ಅಕ್ಕಳಾದ ಗಂಗಾಬಾಯಿ ವಿಚಾರ ನಾನು ದಾವೆಯಲ್ಲಿ ಬರೆಸಿಲ್ಲ ಎಂದರೆ ಸರಿ. ಗಂಗಾಬಾಯಿರವರ ಹೆಸರು ಮುಚ್ಚಿಟ್ಟು ದಾವೆ ಹಾಕಿರುತ್ತೇನೆ ಎಂದರೆ ಸಾಕ್ಷಿ ನನಗೆ ಅವರು ಯಾವುದೇ ತೊಂದರೆ ನೀಡಿಲ್ಲ, ಅವರ ಹೆಸರು ಏಕೆ ಹಾಕಬೇಕು ಎನ್ನುತ್ತಾರೆ. ನನ್ನ ಆಸ್ತಿಗೆ ಯಾರು ತೊಂದರೆ ಕೊಡಬಾರದು ಎಂದು ನಾನು ದಾವೆಯನ್ನು ಹಾಕಿರುತ್ತೇನೆ.

3. ನಮ್ಮ ತಂದೆಗೆ ಒಟ್ಟು 3 ಆಸ್ತಿಗಳು ಇದ್ದವು. ಸರ್ವೆ ನಂಬರ 80 ರಲ್ಲಿ 20 ಎಕರೆ 26 ಗುಂಟೆ ಜಮೀನು ನಮಗೆ ಇದೆ ಎಂದರೆ ಸರಿ. ಸರ್ವೆ ನಂಬರ 81 ರಲ್ಲಿ 6 ಎಕರೆ 20 ಗುಂಟೆ ಜಮೀನು ನಮಗೆ ಇದೆ ಎಂದರೆ ಸರಿ. ಸರ್ವೆ ನಂಬರ 34 ರಲ್ಲಿ 1 ಎಕರೆ

13 ಗುಂಟೆ ಜಮೀನು ನಮಗೆ ಇದೆ ಎಂದರೆ ಸರಿ. ಸದರಿ ವಿಚಾರಗಳನ್ನು ದಾವೆಯಲ್ಲಿ ಹೇಳಿ ಬರೆಸಿರುತ್ತೇನೆ. ಸದರಿ ಜಮೀನುಗಳಲ್ಲಿ ನಮಗೆ ಯಾರಿಗೂ ಪಾಲು ಆಗಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನುಗಳು ಹಿರಿಯರಿಂದ ಬಂದಿವೆ ಎಂದರೆ ಸರಿ. ನನ್ನ ತಂದೆ ಅಂದಾಜಿನ ಮೇಲೆ ನಮಗೆ ಆಸ್ತಿಗಳನ್ನು ನೀಡಿರುತ್ತಾರೆ ಆದರೆ ಅದರಲ್ಲಿ ಯಾವುದೇ ಸರಿಯಾದ ಪಾಲು ನಮಗೆ ಆಗಿಲ್ಲ ಎಂದರೆ ಸರಿಯಲ್ಲ.

4. ಸರ್ವೆ ನಂಬರ 81 ರಲ್ಲಿ ನಾವು ಎಲ್ಲ ಅಣ್ಣ-ತಮ್ಮಂದಿರರು ಮನೆಗಳನ್ನು ಕಟ್ಟಿಕೊಂಡಿರುತ್ತೇವೆ. ಸರ್ವೆ ನಂಬರ 81 ರ ಜಮೀನು 1ನೇ ಪ್ರತಿವಾದಿ ಶಿವಯೋಗೆಪ್ಪ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ನಾನು ಉಳುಮೆ ಮಾಡುತ್ತಿದ್ದೇನೆ ಎನ್ನುತ್ತಾರೆ. ಸರ್ವೆ ನಂಬರ 80 ರಲ್ಲಿ 4 ಎಕರೆ 13 ಗುಂಟೆ ಮಾತ್ರ 1ನೇ ಪ್ರತಿವಾದಿ ಶಿವಯೋಗೆಪ್ಪರವರ ಹೆಸರಿನಲ್ಲಿ ನಾವು ಇಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಅದನ್ನು ನಮ್ಮ ತಂದೆ ಮಾಡಿ ಇಟ್ಟಿರುತ್ತಾರೆ ಎನ್ನುತ್ತಾರೆ. ಸರ್ವೆ ನಂಬರ 81 ರ 6 ಎಕರೆ 20 ಗುಂಟೆ ಜಮೀನು ನನ್ನ ಹೆಸರಿನಲ್ಲಿಯೇ ಇದೆ ಎಂದರೆ ಸರಿ. ನಾನು ಸರ್ವೆ ನಂಬರ 80 ರಲ್ಲಿನ 4 ಎಕರೆ 13 ಗುಂಟೆ ಜಮೀನು ಉಳುಮೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಮ್ಮ ತಂದೆ ವಿಭಾಗ ಮಾಡಿದ ಕುರಿತು ದಾಖಲೆ ನ್ಯಾಯಾಲಯಕ್ಕೆ ಹಾಜರ್ ಪಡಿಸಿರುತ್ತೇನೆ. ನನ್ನ ಸಹೋದರಿಯಾದ ಗಂಗಾಬಾಯಿರವರಿಗೆ ಆಸ್ತಿ ಹೋದ ಕುರಿತು ಸದರಿ ದಾಖಲೆಯಲ್ಲಿ ನಮೂದು ಇರುವುದಿಲ್ಲ. ಸರ್ವೆ ನಂಬರ 80 ರ 20 ಎಕರೆ 26

ಗುಂಟೆ ಜಮೀನಿನಲ್ಲಿ 4 ಜನರಿಗೆ ಹಿಸ್ಸೆಗಳು ಆಗಿವೆ ಎಂದರೆ ಸರಿ. ಸದರಿ ಜಮೀನದಲ್ಲಿ ತಲಾ 5 ಎಕರೆ ನಮಗೆ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ನಮ್ಮ ತಂದೆ ಮಾಡಿಕೊಟ್ಟಂತೆ ನಮಗೆ ಜಮೀನು ಇರುತ್ತದೆ ಎನ್ನುತ್ತಾರೆ.

6. ನನ್ನ ಸಹೋದರನಾದ 2ನೇ ಪ್ರತಿವಾದಿ ಅವ್ವಪ್ಪ ಸರ್ವೆ ನಂಬರ 80 ರಲ್ಲಿ 4 ಎಕರೆ 13 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ನನ್ನ ಸಹೋದರನಾದ 3ನೇ ಪ್ರತಿವಾದಿ ಶ್ರೀಶೈಲರವರಿಗೆ 6 ಎಕರೆ ಜಮೀನು ಇರುತ್ತದೆ ಎಂದರೆ ಸರಿ. ನನ್ನ ಸಹೋದರನಾದ 4ನೇ ಪ್ರತಿವಾದಿ ಮಡಿವಾಳಪ್ಪರವರಿಗೆ ಕೂಡಾ 6 ಎಕರೆ ಜಮೀನು ಇರುತ್ತದೆ ಎಂದರೆ ಸರಿ. ನನ್ನ ಅಣ್ಣನಾದ 1ನೇ ಪ್ರತಿವಾದಿ ಶಿವಯೋಗಪ್ಪರವರು ನಮ್ಮಲ್ಲಿ ಹಿರಿಯ ಮಗ ಎಂದರೆ ಸರಿ. ನಮ್ಮ ಮದುವೆಗಳನ್ನು 1ನೇ ಪ್ರತಿವಾದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ನನ್ನ ತಂದೆ ಮಾಡಿರುತ್ತಾರೆ ಎನ್ನುತ್ತಾರೆ. 1ನೇ ಪ್ರತಿವಾದಿ ಪಾರ್ಶ್ವವಾಯು ಆಗಿದೆ ಎಂದರೆ ಸರಿ.

7. ನಾವು ಅಣ್ಣ-ತಮ್ಮಂದಿರು ಎಲ್ಲರೂ ಒಂದಾಗಿ 1ನೇ ಪ್ರತಿವಾದಿಗೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ 1ನೇ ಪ್ರತಿವಾದಿಯೇ ನಮ್ಮೆಲ್ಲರಿಗೆ ತೊಂದರೆ ಕೊಡುತ್ತಿದ್ದಾನೆ ಎನ್ನುತ್ತಾರೆ. 1ನೇ ಪ್ರತಿವಾದಿ ನನಗೆ ಆಸ್ತಿ ಬದಲಾಯಿಸಿ ಕೊಡಿ ಎಂದು ತೊಂದರೆ ಕೊಡುತ್ತಿದ್ದಾನೆ.

8. ಸರ್ವೆ ನಂಬರ 80/1 ರಲ್ಲಿ 4 ಎಕರೆ 13 ಗುಂಟೆ ಜಮೀನು ಮಾತ್ರ 1ನೇ ಪ್ರತಿವಾದಿಗೆ ಇದೆ ಎಂದರೆ ಸರಿ. ಸರ್ವೆ ನಂಬರ 34 ರ 1 ಎಕರೆ 13 ಗುಂಟೆ ಜಮೀನಿನಲ್ಲಿ ನಮ್ಮೆಲ್ಲರ ಜಂಟಿ ಹೆಸರು ಇದೆ ಎಂದರೆ ಸರಿ. ಸರ್ವೆ ನಂಬರ 81 ರಲ್ಲಿ 1ನೇ ಪ್ರತಿವಾದಿ ಹೆಸರು ಇಲ್ಲ ಎಂದರೆ ಸರಿ.

9. ನನ್ನ ಸರ್ವೆ ನಂಬರ 81 ರ 6 ಎಕರೆ 20 ಗುಂಟೆ ಜಮೀನಿನ ಚಕ್ ಬಂದಿ ನನಗೆ ಗೊತ್ತು. ಸದರಿ ಜಮೀನಿನ ಉತ್ತರಕ್ಕೆ ಅವ್ವಣ್ಣನ ಜಮೀನು ಇರುತ್ತದೆ. ದಕ್ಷಿಣಕ್ಕೆ ರಾವುತ ಕೊಳ್ಳಿರವರ ಜಮೀನು ಇರುತ್ತದೆ. ಪೂರ್ವಕ್ಕೆ ಅಪ್ಪಣ್ಣ ಸಾಹುಕಾರ ಅಮ್ಮಣ್ಣಿರವರ ಜಮೀನು ಇದೆ. ಪಶ್ಚಿಮಕ್ಕೆ ರಸ್ತೆ ಇದೆ ಅದರ ನಂತರ ಗಾಂವಾಟಾನ ಇರುತ್ತದೆ. ಸದರಿ ಜಮೀನಿನ ಸ್ವಾಧೀನದಲ್ಲಿ 1ನೇ ಪ್ರತಿವಾದಿ ಶಿವಯೋಗೆಪ್ಪರವರು ಇರುತ್ತಾರೆ ಎಂದರೆ ಸರಿಯಲ್ಲ. ನಾನು ಸದರಿ ಜಮೀನಿನ ಸ್ವಾಧೀನದಲ್ಲಿ ಇರದ ನನಗೆ ಸರಿಯಾದ ಚಕ್ ಬಂದಿ ಗೊತ್ತಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ 81 ರ 6 ಎಕರೆ 20 ಗುಂಟೆ ಜಮೀನಿನಲ್ಲಿ ಈಗ ಪ್ಲಾಟುಗಳು ಆಗುತ್ತಿವೆ ಎಂದರೆ ಸರಿಯಲ್ಲ.

10. ಸರ್ವೆ ನಂಬರ 80, 81 ಮತ್ತು 34 ರಲ್ಲಿ ನಮಗೆ ಸಮನಾಗಿ ಪಾಲು ಆಗಿಲ್ಲ ಎಂದರೆ ಸರಿ. ಸಾಕ್ಷಿ ನಮ್ಮ ತಂದೆ ಮಾಡಿದಂತೆ ಪಾಲು ಆಗಿವೆ ಎನ್ನುತ್ತಾರೆ. 1ನೇ ಪ್ರತಿವಾದಿ ಎಲ್ಲ ಜಮೀನುಗಳಲ್ಲಿ ಸಮಪಾಲು ಕೇಳಿ ದಾವೆ ಹಾಕಿರುತ್ತಾರೆ ಎಂದರೆ ಸರಿ. ನನ್ನ ಸಹೋದರಿಯಾದ ಗಂಗಾಬಾಯಿರವರಿಗೂ ಪಾಲು ಕೇಳಿ ಸದರಿ ದಾವೆ ಹಾಕಲಾಗಿದೆ

ಎಂದರೆ ಸರಿ. ನಾನು ನನ್ನ ಸಹೋದರಿ ಗಂಗಾಬಾಯಿರವರ ಹೆಸರು ಮುಚ್ಚಿಟ್ಟು ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ತೊಂದರೆ ನೀಡಿದ ಬಗ್ಗೆ ನಾನು ಪೊಲೀಸರಿಗೆ ದೂರು ನೀಡಿಲ್ಲ. ಸಾಕ್ಷಿ ಊರಿನಲ್ಲಿ ಹೇಳಿದರೂ ಕೇಳದ ಕಾರಣ ನಾನು ದಾವೆ ಹಾಕಿರುತ್ತೇನೆ ಎನ್ನುತ್ತಾರೆ. 1ನೇ ಪ್ರತಿವಾದಿ ನಾನು ಹೇಳಿದಂತೆ ನನಗೆ ಯಾವುದೇ ತೊಂದರೆ ನೀಡಿದೆ ಇದ್ದರೂ ನಾವೆಲ್ಲ ಅಣ್ಣ-ತಮ್ಮಂದಿರು ಸೇರಿಕೊಂಡು ಅವರಿಡಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ದಾವೆಯಲ್ಲಿ ಸುಳ್ಳು ಸಂಗತಿಗಳನ್ನು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ.

11. ವಾದಿ ಸರ್ವೆ ನಂಬರ 80 ಮತ್ತು 81 ರ ಎರಡು ಜಮೀನಿನ ಸ್ವಾಧೀನದಲ್ಲಿ ಈಗ ಇಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸರ್ವೆ ನಂಬರ 81/ 1 ರಲ್ಲಿ 1ನೇ ಪ್ರತಿವಾದಿಗೆ ಪಾಲು ಹೋಗಬೇಕಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ನಮ್ಮ ತಂದೆ ಪಾಲು ಮಾಡಿರುತ್ತಾರೆ ಎನ್ನುತ್ತಾರೆ. 1ನೇ ಪ್ರತಿವಾದಿ ಶಾಲೆ ಕಲಿತಿಲ್ಲ ಎಂದರೆ ಸರಿಯಲ್ಲ. ಅವರು 2-3 ನೇ ತರಗತಿ ಓದಿರಬಹುದು. ನಾವು 4 ಜನ ಅಣ್ಣ-ತಮ್ಮಂದಿರು 1ನೇ ಪ್ರತಿವಾದಿಗೆ ಮೋಸ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಸರ್ವೆ ನಂಬರ 81 ರ ಜಮೀನು ಊರಿಗೆ ಹತ್ತಿ ಇರುವುದರಿಂದ ಅದನ್ನು ನಾವೇ ಹೊಡೆದುಕೊಳ್ಳಬೇಕು ಎಂಬ ಉದ್ದೇಶದಿಂದ 1ನೇ ಪ್ರತಿವಾದಿ ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ.

12. ನಾನು ದಾವಾ ಜಮೀನದಲ್ಲಿ ಸ್ವಾಧೀನದಲ್ಲಿ ಇದ್ದ ಕುರಿತು ಖಬ್ಜಾ ಹಿಡುವಳಿ ದಾಖಲೆ ಹಾಕಿರುವುದಿಲ್ಲ. ಸಾಕ್ಷಿ ಪಹಣಿಗಳನ್ನು ಹಾಜರ್ ಪಡಿಸಿರುತ್ತೇನೆ ಎನ್ನುತ್ತಾರೆ. ನನ್ನ ಅಣ್ಣನಾದ 1ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಒಂದು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ :** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.